ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ7[2]ಪ್ರಾಶಿಅ.ಹೊ.ಶಾ.ನೋಂ.10:2021-22 ದಿನಾಂಕ:11ನೇ ಡಿಸಂಬರ್ 2021

: ಸು ತ್ತೋ ಲೆ :

ವಿಷಯ: 2022-23ನೇ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ / ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಕುರಿತು ನೋಂದಾಯಿತ ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕ ವಿಸ್ತರಣೆಯ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ- 1983 ಸೆಕ್ಷನ್ 30 ಮತ್ತು 31.

2. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ ಮತ್ತು ನೋಂದಣಿ] ನಿಯಮಗಳು-1997.
3. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009.
4. Karnataka Educational Institutions [classification, Regulation and Prescription of Curricula etc] [Amendment] Rules-2018.
   *G.* ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:709:ಪಿಜಿಸಿ:2017, ದಿನಾಂಕ:07.03.2018.
   *H.* ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:709:ಪಿಜಿಸಿ:2017, ದಿನಾಂಕ:08.03.2018.
5. Karnataka Educational Institutions [classification & Registration] [Amendment-1 & 2] Rules.2018.
6. ಸರ್ಕಾರದ ಆದೇಶ ಸಂಖ್ಯೆ:ಇಡಿ.587.ಪಿಜಿಸಿ.2018, ದಿನಾಂಕ:19.11.2018
7. ಸರ್ಕಾರದ ಆದೇಶ ಸಂಖ್ಯೆ:ಇಪಿ.46ಎಸ್.ಹೆಚ್‌ಹೆಚ್2020,ದಿನಾಂಕ:10.11.2020
8. ಸರ್ಕಾರದ ಆದೇಶ ಸಂಖ್ಯೆ:ಇಪಿ.16.ಪಿಜಿಸಿ.2021, ದಿನಾಂಕ:22.06.2021
9. ಸರ್ಕಾರದ ಪತ್ರ ಸಂಖ್ಯೆ:ಇಡಿ.92.ಪಿಜಿಸಿ.2020, ದಿನಾಂಕ:02.03.2021
10. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ.ಡೈಸ್ ವಿಲೀನ.6/2020-21, ದಿನಾಂಕ:17.05.2021.
11. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7(2)ಪ್ರಾಶಿಅ.ಹೊ.ಶಾ.ನೋಂ.10/2021-22 ದಿನಾಂಕ:13-10-2021,ಮತ್ತು ದಿನಾಂಕ:29-11-2021

2022-23ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ ಇಲಾಖಾ ವೆಬ್‌ಸೈಟ್‌ನಲ್ಲಿ [www.schooleducation.kar.nic.in] ಅರ್ಜಿಗಳನ್ನು ಸಲ್ಲಿಸಲು ದಿನಾಂಕ:30-11-2021ರವರೆಗೆ ಅವಕಾಶ ಕಲ್ಪಿಸಿ ಸುತ್ತೋಲೆ ಹೊರಡಿಸಲಾಗಿತ್ತು.

ಕಾಲಾವಕಾಶವನ್ನು ವಿಸ್ತರಿಸುವಂತೆ ಅನೇಕ ಸಂಘ ಸಂಸ್ಥೆಗಳು ನೀಡಿರುವ ಮನವಿ ಹಾಗೂ ಕರ್ನಾಟಕ ಶಿಕ್ಷಣ ಕಾಯಿದೆ ಸೆಕ್ಷನ್-30 ಮತ್ತು ತಿದ್ದುಪಡಿ ನಿಯಮಗಳು-2018 ರಲ್ಲಿ ತಿಳಿಸಿರುವಂತೆ ಆಡಳಿತ ಮಂಡಳಿಗಳಿಗೆ ಗರಿಷ್ಠ 60 ದಿನಗಳ ಒಳಗೆ ಅವಕಾಶ ನೀಡಲು ಆದೇಶ ಇರುವ ಹಿನ್ನಲೆಯಲ್ಲಿ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ **2022-23ನೇ ಸಾಲಿನ ಹೊಸ ಶಾಲೆಗಳ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಅರ್ಹ ಆಡಳಿತ ಮಂಡಳಿಗಳು ಸಲ್ಲಿಸಲು ಅವಕಾಶವಾಗುವಂತೆ ದಿನಾಂಕ:30-11-2021 ರಿಂದ ದಿನಾಂಕ:15-01-2022ರವರೆಗೆ ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಿದೆ.** ದಿನಾಂಕ:13-10-2021ರ ಸುತ್ತೋಲೆಯಲ್ಲಿ ವಿವರಿಸಿರುವ ಎಲ್ಲಾ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

***: 2022-23ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪರಿಷ್ಕೃತ ವೇಳಾಪಟ್ಟಿ :***

| ಕ್ರ.ಸಂ | ವಿಷಯ | ದಿನಾಂಕ |
|---|---|---|
| 1. | ಅರ್ಹ ನೋಂದಾಯಿತ ಸಂಸ್ಥೆಗಳು ಹೊಸ ಶಾಲೆಗಳ ನೋಂದಣಿಗಾಗಿ / ಉನ್ನತೀಕರಿಸುವ ಶಾಲೆಗಳ ನೋಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ. | 22-10-2021 ರಿಂದ 15-01-2022 |
| 2. | ಆಡಳಿತ ಮಂಡಳಿಗಳಿಂದ ಆನ್‌ಲೈನ್ ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಹೊಸ ಶಾಲೆಯ ತಂತ್ರಾಂಶದಿಂದ ಎಸ್.ಎ.ಟಿ.ಎಸ್ ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಲು ನಿಗಧಿಪಡಿಸಿರುವ ದಿನಾಂಕ: | 25-10-2021 ರಿಂದ 17-01-2022 |
| 3. | ಎಸ್.ಎ.ಟಿ.ಎಸ್ ತಂತ್ರಾಂಶದಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಲಾಗಿನ್ ಗೆ ಮಾಹಿತಿಗಳನ್ನು ಅಪ್‌ಲೋಡ್ ಮಾಡಲು ನಿಗಧಿಪಡಿಸಿದ ದಿನಾಂಕ | 26-10-2021 ರಿಂದ 19-01-2022 |
| 4. | ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ. | 28-10-2021 ರಿಂದ 24-01-2022 |
| 5. | ಉಪನಿರ್ದೇಶಕರು ಅರ್ಜಿಗಳನ್ನು ಪರಿಶೀಲಿಸಿ ಅಪೂರ್ಣ ಅರ್ಜಿಗಳನ್ನು ಆಡಳಿತ ಮಂಡಳಿಗೆ ಹಿಂತಿರುಗಿಸಲು ಕಡೆಯ ದಿನಾಂಕ | 29-10-2021 ರಿಂದ 28-01-2022 |
| 6. | ಆಡಳಿತ ಮಂಡಳಿಗಳು ಅರ್ಜಿಗಳನ್ನು ಸರಿಪಡಿಸಿ ಉಪನಿರ್ದೇಶಕರಿಗೆ ಹಿಂತಿರುಗಿಸಲು ಕಡೆಯ ದಿನಾಂಕ | 29-10-2021 ರಿಂದ 03-02-2022 |
| 7. | ಉಪನಿರ್ದೇಶಕರು ಸಂಬಂಧಿಸಿದ ಆಯುಕ್ತಾಲಯಕ್ಕೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ. | 29-10-2021 ರಿಂದ 08-02-2022 |
| 8. | ಸಂಬಂಧಿಸಿದ ಆಯುಕ್ತಾಲಯಗಳಲ್ಲಿ / ಉಪನಿರ್ದೇಶಕರ ಕಛೇರಿಗಳಲ್ಲಿ ಹೊಸ ಶಾಲೆಗಳ ನೋಂದಣಿ / ಉನ್ನತೀಕರಿಸುವ ಶಾಲೆಗಳ ನೋಂದಣಿ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ. | 18-02-2022 |

**ಆಯುಕ್ತರ ಆದೇಶದ ಮೇರೆಗೆ**

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

***ಇವರಿಗೆ:***

01 ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ
02 ರಾಜ್ಯದ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

***ಪ್ರತಿಯನ್ನು:***

03 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ] ಇವರ ಆಪ್ತ ಶಾಖೆ, ಇವರಿಗೆ ಕಳುಹಿಸುತ್ತಾ ಮಾನ್ಯ ಪ್ರಧಾನ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು [ಪ್ರೌಢ ಶಿಕ್ಷಣ] ಇವರ ಗಮನಕ್ಕೆ ತರಲು ಕೋರಿದೆ.

04 ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರಿಗೆ ಕಳುಹಿಸುತ್ತಾ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.

05 ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ನಿರ್ದೇಶಕರ ಗಮನಕ್ಕೆ ತರಲು ತಿಳಿಸಿದೆ.

06 ನಿರ್ದೇಶಕರು ಪ್ರೌಢ ಶಿಕ್ಷಣ ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ನಿರ್ದೇಶಕರ ಗಮನಕ್ಕೆ ತರಲು ತಿಳಿಸಿದೆ.

07 ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್ ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

08 ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

09 ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

10 ಕಛೇರಿ ಪ್ರತಿ.